8) ಶಾಸನ ರಚನೆ:

2000ನೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಜಂಟಿ ಸಲಹಾ ಸಮಿತಿಯು ವರದಿ ಮಾಡಿರುವಂತೆ:

ಡಾ: ಜಿ.ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, 2000ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಜಂಟಿ ಸಲಹಾ ಸಮಿತಿಯು ವರದಿ ಮಾಡಿರುವಂತೆ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು: ಮಾನ್ಯ ಸಚಿವರು ಅದರ ಬಗ್ಗೆ ಐದು ನಿಮಿಷ ಮಾತನಾಡಿದ ಮೇಲೆ ನಿಯಮ 69ರ ಅಡಿಯಲ್ಲಿ ನೀರಾ ವಿಷಯದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, ಐದು ಗಂಟೆಯಾದ ಮೇಲೆ ಚರ್ಚೆಗೆ ಅವಕಾಶ ಕೊಡುವುದಾಗಿ ತಾವೇ ರೂಲಿಂಗ್ ಕೊಟ್ಟಿದ್ದೀರಿ. ಆದರೆ ಇವತ್ತೂ ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಐದು ಗಂಟೆಯಾದ ಮೇಲೆ ಕೊಡದಿದ್ದರೆ ಹೇಗೆ? ಪ್ರತಿನಿತ್ಯ ಹಿಗೆಯೇ ಆಗುತ್ತಿದೆ.

ಡಾ: ಜಿ.ಪರಮೇಶ್ವರ್: ಬಿಲ್ಲಿನ ಬಗ್ಗೆ ತಾವೇಕೆ ಇಷ್ಟೊಂದು ಭಯ ಬೀಳುತ್ತೀರಿ? ಇವತ್ತು ಪ್ರಾರಂಭ ಮಾಡಿ, ನಾಳೆ ಚರ್ಚೆ ಮಾಡಿ.

ಶ್ರೀ ಜಗದೀಶ್ ಶೆಟ್ಟರ್: ಐದು ನಿಮಿಷದಲ್ಲಿ ಅದು ಮುಗಿಯುತ್ತದೆಯೇ? ಏಕೆ ಇಷ್ಟೊಂದು ಆತುರ ಮಾಡುತ್ತೀರಿ? ಅದನ್ನು ನಾಳೆ ತೆಗೆದುಕೊಳ್ಳಿ.

ಅಧ್ಯಕ್ಷರು: ನಾವು ಪ್ರೊಸೀಜರ್ ಅನುಸಾರ ಹೋಗುತ್ತಿದ್ದೇವೆ.

ಡಾ: ಜಿ.ಪರಮೇಶ್ವರ್: ನಾನು ಐದು ನಿಮಿಷದಲ್ಲಿ ಮುಗಿಸುತ್ತೇನೆ. ಅನಂತರ ತಾವು ಇತರೆ ಕಾರ್ಯಕಲಾಪಗಳನ್ನು ಮುಂದುವರೆಸಬಹುದು.

ಅಧ್ಯಕ್ಷರು: ಅವರು ಪ್ರಾರಂಭ ಮಾಡಲಿ, ಐದು ನಿಮಿಷದ ನಂತರ ನಿಯಮ 69ರ ಅಡಿಯಲ್ಲಿ ಅದನ್ನು ಚರ್ಚೆಗೆ ತೆಗೆದುಕೊಳ್ಳೋಣ. ನೀರಾದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಡಿ.ಬಿ.ಚಂದ್ರೇಗೌಡ: ನೀರಾವನ್ನು ತೆಗೆದುಕೊಂಡ ಮೇಲೆ ವಿಶ್ವವಿದ್ಯಾನಿಲಯದ ಬಿಲ್ಲನ್ನು ತೆಗೆದುಕೊಳ್ಳಲು ಆಗುವುದಿಲ್ಲ! ಆದ್ದರಿಂದ ವಿಶ್ವವಿದ್ಯಾನಿಲಯದ ಬಿಲ್ಲನ್ನು

ಮೊದಲು ತೆಗೆದುಕೊಂಡು ಅನಂತರ ನೀರಾ ವಿಷಯವನ್ನು ತೆಗೆದುಕೊಂಡರೆ ಒಳ್ಳೆಯದು!

ಶ್ರೀ ಬಿ.ಬಿ.ಶಿವಪ್ಪ: ತಾವು ನೀರಾದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬೇಕಾಗಿದ್ದರೆ ಬೆಳಿಗ್ಗೆ ಐದು ಗಂಟೆಯೊಳಗೆ ತೆಗೆದುಕೊಳ್ಳಬೇಕು! ಐದು ಗಂಟೆಯ ನಂತರ ಅದು ನೀರಾ ಅಲ್ಲ!

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಕೇವಲ ಮಂಡನೆ ಮಾಡಿ ಐದು ನಿಮಿಷದಲ್ಲಿ ಮುಗಿಸುತ್ತಾರೆ. ಅನಂತರ ಅದನ್ನು ತೆಗೆದುಕೊಳ್ಳಿ.

+ ಡಾ:ಜಿ.ಪರಮೇಶ್ವರ್(ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ವಿಶ್ವವಿದ್ಯಾನಿಲಯ ವಿಧೇಯಕವನ್ನು 1976ರಲ್ಲಿ ತರುವುದಕ್ಕೂ ಮೊದಲು ರಾಜ್ಯದಲ್ಲಿರುವ ವಿಶ್ವವಿದ್ಯಾನಿಲಯಗಳು, ಮೈಸೂರು, ಕರ್ನಾಟಕ, ಬೆಂಗಳೂರು ಇರಬಹುದು ಇವುಗಳಿಗೆ ಬೇರೆ ಬೇರೆ ಮಸೂದೆಗಳನ್ನು ತಂದಿದ್ದರು. ಆದರೆ 1986ರಲ್ಲಿ ಡಾ॥ರಾಜ್ ಎಂಬ ಪ್ರೊಫೆಸರ್‌ರವರ ಕಾಂಪ್ರಹೆನ್‌ಸೀವ್ ಅಮೆಂಡ್‌ಮೆಂಟ್ ತಂದ ಮೇಲೆ ಈ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಸೇರಿಸಿ ಒಟ್ಟಾರೆ ಒಂದು ಮಸೂದೆಯಾದ ಕರ್ನಾಟಕ ವಿಶ್ವವಿದ್ಯಾನಿಲಯ ಮಸೂದೆಯನ್ನು ತಂದರು. ಅನಂತರ ಇಂಟರ್-ಯೂನಿವರ್ಸಿಟಿ ಬೋರ್ಡ್‌ನಲ್ಲಿ ಚರ್ಚೆಗೆ ಬಂದಂಥ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯಗಳು, ಶಿಕ್ಷಣ ಬಹಳಷ್ಟು ಬದಲಾವಣೆಯಾಗುತ್ತಿದೆ, ಆದ್ದರಿಂದ ಈ ಪರಿಸ್ಥಿತಿಯಲ್ಲಿ ಅನೇಕ ಬದಲಾವಣೆಗಳನ್ನು ತರಬೇಕಾಗುತ್ತದೆ ಎಂಬ ವಿಚಾರವನ್ನು ಪ್ರಸ್ತಾಪ ಮಾಡಿದಾಗ ವಿಶ್ವವಿದ್ಯಾನಿಲಯದಲ್ಲಿರತಕ್ಕಂಥ ಸೆನೆಟನ್ನು ತೆಗೆಯಬೇಕು ಎನ್ನತಕ್ಕ ಚರ್ಚೆ ಬಂದ ಮೇಲೆ ಆ ಚರ್ಚೆಗೆ ಒಂದು ಸಮಿತಿಯನ್ನು ರಚನೆ ಮಾಡುತ್ತಾರೆ, ಆ ಸಮಿತಿಯ ವರದಿಯು ಬರುವುದಕ್ಕೆ ಮೊದಲೇ ರಾಜ್ಯಪಾಲರು ಒಂದು ಸಮಿತಿಯನ್ನು ರಚನೆ ಮಾಡಿ ಅದಕ್ಕೆ ನಿವೃತ್ತ ಉಪಕುಲಪತಿಯವರಾದ ಶ್ರೀ ನವನೀತರಾವ್‌ರವರನ್ನು ಅಧ್ಯಕ್ಷರನ್ನಾಗಿ ಮಾಡಿ ವಿಶ್ವವಿದ್ಯಾನಿಲಯದ ಶಿಕ್ಷಣದ ಬೆಳವಣಿಗೆಗೆ, ಆ ಪರಿಸ್ಥಿತಿಗೆ ಅನುಗುಣವಾಗಿ ಬದಲಾವಣೆಗಳನ್ನು ತರತಕ್ಕದ್ದನ್ನು ಮಾಡಬೇಕು ಎಂದು ಸಮಿತಿಯನ್ನು ಮಾಡುತ್ತಾರೆ. 1992ರ ಏಪ್ರಿಲ್‌ನಲ್ಲಿ ಮಾಡಿದಂಥ ಸಮಿತಿ 1994ರಲ್ಲಿ ಒಂದು ವರದಿಯನ್ನು ಅದು ಒಪ್ಪಿಸುತ್ತದೆ. ಆ ವರದಿಯನ್ನು ಒಪ್ಪಿಸಿದ ಮೇಲೆ ಅನೇಕ ರೀತಿಯ ಬದಲಾವಣೆಗಳನ್ನು ತರಬೇಕು ಈ ವಿಶ್ವವಿದ್ಯಾನಿಲಯದ ಮಸೂದೆಯಲ್ಲಿ ಎಂದು ಹೇಳಿ ಸನ್ಮಾನ್ಯ ಸಚಿವರಾಗಿದ್ದಂಥ ಸೋಮಶೇಖರ್‌ರವರೂ ಕೂಡ 1997ರಲ್ಲಿ ಪ್ರಯತ್ನವನ್ನು ಮಾಡಿದರು. ಅನೇಕ ಜನರು ಇದರ ಹಿಂದೆ ಇದನ್ನು ವ್ಯಾಖ್ಯಾನ ಮಾಡಿ ಬಹಳಷ್ಟು ಜನ ಪ್ರೊಫೆಸರ್‌ಗಳು, ಶಿಕ್ಷಣ ತಜ್ಞರು ಮತ್ತು ವಿದ್ಯಾರ್ಥಿಗಳು, ರಾಜಕೀಯ ಮುಖಂಡರು ಮತ್ತು ಅನೇಕ

ಜ್ಯುಡಿಷಿಯರಿಯಲ್ಲಿ ಇದ್ದಂಥವರು ಇವರೆಲ್ಲರನ್ನೂ ಕೂಡ 'ಕನ್‌ಸಲ್ಟ್ ಮಾಡಿ ಅವರು ಒಂದು ವರದಿಯನ್ನು ಸಲ್ಲಿಸಿದರು. ಅದನ್ನು ಒಂದು ತಿದ್ದುಪಡಿಯಾಗಿ ಇಡೀ ರಾಜ್ಯಕ್ಕೆ ಒಂದು ವಿಶ್ವವಿದ್ಯಾನಿಲಯದ ಮಸೂದೆಯನ್ನು ಕಾಂಪ್ರಹೆನ್ಸೀವ್ ಆಗಿ ತರಬೇಕೆಂದು ಹೇಳಿ ಅವರು ಹೊರಟಾಗ ಬೇರೆ ಬೇರೆ ಕಾರಣಗಳಿಂದ ಹಿಂದಕ್ಕೆ ಬಿದ್ದು ಹೋಯಿತು. ಇವತ್ತು ನಾವು ನಮ್ಮ ಸರ್ಕಾರ ಬಂದ ಮೇಲೆ ನಾನು ಸಚಿವನಾಗಿ ಬಂದ 15-20 ದಿವಸಗಳಲ್ಲೇ ನಮ್ಮ ಸುದ್ದಿ ಮಾಧ್ಯಮದ ಸ್ನೇಹಿತರು ಕೇಳಿದರು, ನನಗೆ ಅನೇಕ ಜನರು ಕೇಳಿದರು. ವಿಶ್ವವಿದ್ಯಾನಿಲಯದ ಪ್ರೊಫೆಸರ್‌ಗಳು, ವೈಸ್ ಛಾನ್ಸಲರ್‌ಗಳು, ಏನು ನಿಮ್ಮ ಹಿಂದೆ ಸೋಮಶೇಖರ್‌ರವರು ಇದ್ದರು, 1997ರಲ್ಲಿ ಅವರೊಂದು ಮಸೂದೆಯನ್ನು ತರುವುದಕ್ಕೆ ಹೊರಟಾಗ ಅದು ಹಾಗೆ ಬೇರೆ ಬೇರೆ ಕಾರಣದಿಂದ ಬಿದ್ದು ಹೋಯಿತು, ನೀವೂ ಕೂಡ ಆ ಮಸೂದೆಯನ್ನು ತರುತ್ತೀರಾ ಎನ್ನುವ ಮಾತನ್ನು ಕೇಳಿದಾಗ ನಾನು 'ಹೌದು, ಇದರ ಅವಶ್ಯಕತೆ ಇವತ್ತು ಇದೆ, ಇಡೀ ರಾಜ್ಯದಲ್ಲಿ, ಇಡೀ ರಾಷ್ಟ್ರದಲ್ಲಿ ಈ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯಾಗುತ್ತಿರುವಾಗ ಅದಕ್ಕನುಗುಣವಾಗಿ ಶಿಕ್ಷಣ ಕ್ಷೇತ್ರದ ಬದಲಾವಣೆಗಳನ್ನು ತರಬೇಕಾದರೆ ಆ ಮಸೂದೆಯನ್ನು ಕಾನೂನುಗಳನ್ನು ಬದಲಾವಣೆ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಈ ಮಸೂದೆಯನ್ನು ತರುತ್ತೇವೆ ಎನ್ನುವ ಮಾತನ್ನು ನಾನು ಹೇಳಿದ್ದೆ. ಅದೇ ಪ್ರಕಾರ ಕಳೆದ ಎರಡು ವರ್ಷಗಳಿಂದಲೂ ಕೂಡ ನಾವು ಬೇರೆ ಬೇರೆ ಸಂದರ್ಭಗಳಲ್ಲಿ ಅನೇಕ ವಿಜ್ಞಾನಿಗಳ ಜೊತೆ ಶಿಕ್ಷಣ ತಜ್ಞರ ಜೊತೆ ಚರ್ಚೆ ಮಾಡಿ ಇದರ ಬಗ್ಗೆ ಆಮೂಲಾಗ್ರವಾಗಿ ಒಂದು ವಿಚಾರವನ್ನು ಸಂಗ್ರಹಣೆ ಮಾಡಿ ಬದಲಾವಣೆಗಳನ್ನು ತರುವುದಕ್ಕೆ ಪ್ರಯತ್ನವನ್ನು ಮಾಡಿದ್ದೇವೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಜಿಲ್ಲೆಗಳು ಬದಲಾವಣೆಯಾಗಿವೆ, ಹೊಸ ಜಿಲ್ಲೆಗಳು ಬಂದಿದ್ದಾವೆ ಮತ್ತು ವಿಶ್ವವಿದ್ಯಾನಿಲಯಗಳು ಆ ಜಿಲ್ಲೆಗಳಿಗೆ ಅನುಗುಣವಾಗಿ ಮೂರು-ನಾಲ್ಕು ಜಿಲ್ಲೆಗೆ ಅನುಗುಣವಾಗಿ ಆ ಜೂರಿಸ್‌ಡಿಕ್ಷನ್ನನ್ನು ಡಿಸೈಡ್ ಮಾಡಿದ್ದಾರೆ. ಮತ್ತು ಟೆಕ್ನಿಕಲ್ ಎಜ್ಯುಕೇಷನ್‌ಗೆ ಒಂದು ವಿಶ್ವವಿದ್ಯಾನಿಲಯ ಇದೆ. ಏಕೆಂದರೆ ಈ ವಿಶ್ವವಿದ್ಯಾನಿಲಯಗಳಲ್ಲಿ ಮೈಸೂರಿನಲ್ಲಾಗಲೀ, ಬೆಂಗಳೂರಿನಲ್ಲಾಗಲೀ, ಗುಲ್ಬರ್ಗಾದಲ್ಲಾಗಲೀ ಮಂಗಳೂರಿನಲ್ಲಾಗಲೀ ಈ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಇದ್ದಂಥ ಇಂಜಿನಿಯರಿಂಗ್ ಕಾಲೇಜುಗಳನ್ನೆಲ್ಲಾ ತೆಗೆದು ಅಂದರೆ ಬೆಂಗಳೂರಿನಲ್ಲಿ ಮತ್ತು ಕುವೆಂಪು ಯೂನಿವರ್ಸಿಟಿಗಳಲ್ಲಿ ಹೊರತುಪಡಿಸಿ ಇನ್ನೆಲ್ಲಾ ವಿಶ್ವವಿದ್ಯಾನಿಲಯಗಳಲ್ಲೂ ಕೂಡ ಅವುಗಳನ್ನು ತೆಗೆದು ಒಂದು ವಿಶ್ವೇಶ್ವರಯ್ಯ ಟೆಕ್ನಲಾಜಿಕಲ್ ಯೂನಿವರ್ಸಿಟಿ ಎಂದು ಮಾಡಿದ್ದೇವೆ. ಅದರ ಜೊತೆಗೆ ಹೆಂಡಿಕ್ಯಲ್ ಕಾಲೇಜುಗಳನ್ನು ಕೂಡ ಆ ವಿಶ್ವವಿದ್ಯಾನಿಲಯಗಳಿಂದ ತೆಗೆದು ಒಂದು ರಾಜೀವ್ ಗಾಂಧಿ ಹೆಲ್ತ್ ಯೂನಿವರ್ಸಿಟಿ ಎಂದು ಮಾಡಿದ್ದೇವೆ. ಇವೆಲ್ಲದರ ಹಿನ್ನೆಲೆಯಲ್ಲಿ ಇವತ್ತಿನ ದಿವಸ ನಮಗೆ ಈ ರಾಜ್ಯದಲ್ಲಿ ವಿಶ್ವವಿದ್ಯಾನಿಲಯಗಳದ್ದು ಒಂದು ಕಾನೂನು ಬೇಕಾಗುತ್ತದೆ ಒಂದು ವಿಧೇಯಕ ಇರಬೇಕೆಂದು ಹೇಳಿ ನಾವು ಈ ವಿಧೇಯಕವನ್ನು

ತಂದಿದ್ದೇವೆ. ಆದ್ದರಿಂದ ಇದರಲ್ಲಿ ಅನೇಕ ಜನರ ಅಭಿಪ್ರಾಯ ಅನೇಕ ರೀತಿಯಲ್ಲಿ ಇರಬಹುದು. ಅದನ್ನು ನಾನು ಚರ್ಚೆಗೆ ಬಂದಂಥ ಸಂದರ್ಭದಲ್ಲಿ ಮಾನ್ಯ ಗೌರವಾನ್ವಿತ ಸದಸ್ಯರುಗಳು ಚರ್ಚೆ ಮಾಡಿ ಸಲಹೆ ಸೂಚನೆಗಳನ್ನು ಕೊಟ್ಟ ಮೇಲೆ ನಾನು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಏತಕ್ಕೆ ತಂದಿದ್ದೇವೆ, ಏತಕ್ಕೆ ಆ ಬದಲಾವಣೆಯನ್ನು ತಂದಿದ್ದೇವೆ ಎನ್ನುವುದನ್ನು ಅನಂತರ ನಾನು ಜಸ್ಟಿಫೈ ಮಾಡುತ್ತೇನೆ. ಆದರೆ ಇವತ್ತು ಏನು ಈ ಒಂದು ಮಸೂದೆಯನ್ನು ನಾವು ತಂದಿದ್ದೇವೆ, ದಯಮಾಡಿ ಅದನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆನ್ನತಕ್ಕ ಒಂದು ಪ್ರಾರ್ಥನೆಯನ್ನು ಮಾನ್ಯ ಅಧ್ಯಕ್ಷರಲ್ಲಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಐದು ನಿಮಿಷವೆಂದು ಹೇಳಿ ಐದೇ ನಿಮಿಷದಲ್ಲಿ ಮುಗಿಸಿದ್ದೀರಿ.

ಈಗ ನೀರಾ ಬಗ್ಗೆ ಚರ್ಚೆ ಮಾಡೋಣ. ಮಾನ್ಯ ಮಲ್ಲಿಕಾರ್ಜುನ್‌ರವರು ಚರ್ಚೆಯನ್ನು ಪ್ರಾರಂಭ ಮಾಡಲಿ.